**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,**
**ನ್ಯಾಯಾಲಯ,ಹೊಸದುರ್ಗ.**

ಅಸಲು ದಾವಾ ಸಂಖ್ಯೆ.**233/2022** ದಿನಾಂಕ:**25-9-2024**

ಡಿ.ಡಬ್ಲ್ಯೂ:**1**

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು : ವಾದಿಯ ಪರ ಶ್ರೀ ಎಸ್ ಎಂ ವಕೀಲರಿಂದ

4. ಪ್ರಾಪಂಚಿಕವಾಗಿ ಸ್ವ ಜ್ಞಾನ ಇಲ್ಲದ ವ್ಯಕ್ತಿಗೆ ಇನ್ನೊಬ್ಬ ವ್ಯಕ್ತಿಯ ಅವಶ್ಯಕತೆ ಇರುತ್ತದೆ ಎಂದರೆ ಸರಿ. ಅವರಿಗೆ ಇಲಾಖೆಯಿಂದ ಯಾವುದಾದರೂ ದಾಖಲೆ ಮಾಡಬೇಕಾದರೆ ಅವರ ಸಂರಕ್ಷಕರು ಅಥವಾ ಸಹಾಯಕರ ಅವಶ್ಯಕತೆ ಇರುತ್ತದೆ ಎಂದರೆ ಸರಿ. ನನಗೆ 10 ವರ್ಷ ವಯಸ್ಸಾದಾಗಿನಿಂದ ನನಗೆ ವಾದಿಯ ಸಂಪರ್ಕ ಇರುತ್ತದೆ. ವಾದಿಗೆ ಆತನ ಹೆಂಡತಿ ಹೊರತುಪತಿಸಿ ತಂದೆ ತಾಯಿ ಮಕ್ಕಳು ಇರುವುದಿಲ್ಲ. ವಾದಿಗೆ ಶೇಕಡಾ 70 ರಷ್ಟು ಬುದ್ದಿ ಮಾಂಧ್ಯತೆ ಇರುತ್ತದೆ ಎಂದು ವೈದ್ಯರ ಪ್ರಮಾಣಪತ್ರ ಹಾಜರುಮಾಡಿ ಈ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸುಳ್ಳು. ವಾದಿ ಶೇ.70 ರಷ್ಟು ಬುದ್ದಿ ಮಾಂಧ್ಯತೆ ಇರುತ್ತದೆ ಎಂದು ವೈದ್ಯರ ಪ್ರಮಾಣಪತ್ರವನ್ನು ಈ ದಾವೆಯನ್ನು ದಾಖಲಿಸಿದ ನಂತರ ನೋಡಿರುತ್ತೇನೆ. ಸದರಿ ಪ್ರಮಾಣಪತ್ರವು ತಪ್ಪು ಎಂದು ನಾನು ಈ ದಾವೆ ದಾಖಲಿಸಿದ ನಂತರ ಮತ್ತು ವಾದಿ ಪರ ಸಾಕ್ಷ್ಯ ಆದ ನಂತರ ಅದನ್ನು ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನಿಸಿರುವುದಿಲ್ಲ.

5. ದಾವಾ ಆಸ್ತಿಯು ಹೊಸದುರ್ಗ ಪಟ್ಟಣದಲ್ಲಿ ಇದ್ದು ಹೆಚ್ಚು ಮೌಲ್ಯ ಹೊಂದಿರುವ ಆಸ್ತಿ ಎಂದರೆ ಸರಿ. ವಾದಿಯು ಶ್ರೀಧರ ನರ್ಸಿಂಗ್ ಹೋಂ ಮತ್ತು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವಿಷಯ ನನಗೆ ಮೊದಲಿನಿಂದಲೂ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಓ ಎಸ್ ನಂ.104/2010 ರ ದಾವೆಯನ್ನು ದಾಖಲಿಸುವ ಸಮಯದಲ್ಲಿ ವಾದಿ ಶ್ರೀಧರ

ನರ್ಸಿಂಗ್ ಹೋಂ ನಲ್ಲಿ ಒಳ ಮತ್ತು ಹೊರ ರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ ಸುಳ್ಳು. ಸದರಿ ದಾವೆ ಮತ್ತು ನಂತರದ ಬೇರೆ ನ್ಯಾಯಾಲಯದ ಪ್ರಕರಣಗಳಲ್ಲಿ ವಾದಿಯನ್ನು ಅವರ ಹೆಂಡತಿ ಸಂರಕ್ಷಣದಾರಳಾಗಿ ಪ್ರತಿನಿಧಿಸಿರುವುದಿಲ್ಲ ಎಂದರೆ ಸರಿ. ವಾದಿ ಮೊದಲಿನಿಂದಲೂ ಬುದ್ಧಿಮಾಂಧ್ಯರಾಗಿರುವ ವಿಷಯ ನನಗೆ ತಿಳಿದಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಶೇ.70 ರಷ್ಟು ಬುದ್ಧಿಮಾಂಧ್ಯತೆ ಇರುತ್ತದೆ ಎಂದು ನೀಡಿರುವ ಪ್ರಮಾಣಪತ್ರ ಸರಿ ಇರುತ್ತದೆ ಎಂದರೆ ಸರಿಯಲ್ಲ. ವಾದಿ ಬುದ್ಧಿಮಾಂಧ್ಯನಾಗಿರುವ ಕಾರಣ ಆತನ ಹೆಂಡತಿ ಆತನ ಸಂರಕ್ಷದಾರನಾಗಿ ಈ ದಾವೆಯನ್ನು ಪ್ರತಿನಿಧಿಸುವುದು ಅವಶ್ಯಕವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ.

(ಪ್ರಸನ್ನ ಕುಮಾರ್ ಸಿ)
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**